


International Journal of Kannada Research
www.kannadajournal.com

ISSN: 2454–5813
IJSR 2017; 3(3): 109-114
© 2017 IJKS
www.kannadajournal.com
Received: 29-05-2017
Accepted: 06-07-2017

**ಡಾ. ಕೆ ಶಿವಾನಂದಯ್ಯ**
ಸಹಪ್ರಾಧ್ಯಾಪಕರು,
ಸ್ನಾತಕೋತ್ತರ ಕನ್ನಡ ವಿಭಾಗ,
ಸರ್ಕಾರಿ ಕಲಾ ಕಾಲೇಜು
(ಸ್ವಾಯತ್ತ), ಚಿತ್ರದುರ್ಗ,
ಕರ್ನಾಟಕ, ಭಾರತ

**Correspondence**
**ಡಾ. ಕೆ ಶಿವಾನಂದಯ್ಯ**
ಸಹಪ್ರಾಧ್ಯಾಪಕರು,
ಸ್ನಾತಕೋತ್ತರ ಕನ್ನಡ ವಿಭಾಗ,
ಸರ್ಕಾರಿ ಕಲಾ ಕಾಲೇಜು
(ಸ್ವಾಯತ್ತ), ಚಿತ್ರದುರ್ಗ,
ಕರ್ನಾಟಕ, ಭಾರತ

# ಅ.ನ.ಕೃ ಅವರ ಕಾದಂಬರಿಗಳಲ್ಲಿ ಕಲಾವಿದ ಮತ್ತು ಕಲಾಪ್ರಪಂಚದ ನಿರೂಪಣೆ

**ಡಾ. ಕೆ ಶಿವಾನಂದಯ್ಯ**

**ಪೀಠಿಕೆ**

ಸಾಹಿತ್ಯದ ಹಲವು ಪ್ರಕಾರಗಳಲ್ಲಿ ಕೆಲಸ ಮಾಡಿದ ಅ.ನ.ಕೃ ಕಾದಂಬರಿಕಾರರಾಗಿಯೇ ಗುರುತಿಸಲ್ಪಟ್ಟವರು. ತಮ್ಮ ಪ್ರತಿಯೊಂದು ಕಾದಂಬರಿಗಳಿಗೆ ಬರೆದ ಸುದೀರ್ಘ ಮುನ್ನುಡಿಗಳ ಮೂಲಕ ಸಾಹಿತ್ಯ ಮತ್ತು ಸಂಘಟನೆಯ ಪ್ರಚಾರ ಮಾಡಿದವರಲ್ಲಿ ಅ.ನ.ಕೃ ಮೊದಲಿಗರು. ಅ.ನ.ಕೃ ಅವರ ಮೊದಲ ಕಾದಂಬರಿ 'ಜೀವನಯಾತ್ರೆ'. ಸುಮಾರು ಮೂರುವರೆ ದಶಕಕ್ಕೂ ಹೆಚ್ಚು ಕಾಲ ಕಾದಂಬರಿ ರಚನೆಯಲ್ಲಿ ತೊಡಗಿಸಿಕೊಂಡಿದ್ದ ಅ.ನ.ಕೃ 112 ಕಾದಂಬರಿಗಳನ್ನು ರಚಿಸಿದ್ದಾರೆ. ಪ್ರಸ್ತುತ ಪ್ರಬಂಧದಲ್ಲಿ ಕಲಾವಿದ ಮತ್ತು ಕಲಾಪ್ರಪಂಚವನ್ನು ವಸ್ತುವುಳ್ಳ ಕಾದಂಬರಿಗಳನ್ನು ವಿಶ್ಲೇಷಿಸಲಾಗಿದೆ.

ಸಂಗೀತ ಕಲಾವಿದ, ಸಾಹಿತಿ, ಚಿತ್ರಕಾರ, ನಾಟ್ಯಕಲಾವಿದ, ಶಿಲ್ಪಕಲಾವಿದ, ಸಿನಿಮಾಪ್ರಪಂಚ, ರಂಗನಟ, ಕಂಪೆನಿನಾಟಕಗಳ ಏಳುಬೀಳುಗಳನ್ನು ಒಳಗೊಂಡ ಕಾದಂಬರಿಗಳೆಂದರೆ; 'ಉದಯರಾಗ' (1934), 'ಸಂಧ್ಯಾರಾಗ' (1935), ಭುವನಮೋಹಿನಿ (1960), 'ಕಟ್ಟಿದ ಬಣ್ಣ' (1956), 'ಕಲಾವಿದ' (1966), 'ಪರಿವರ್ತನೆ' (1967), 'ಸಾಹಿತ್ಯ ರತ್ನ' (1943), 'ಗಾಜಿನಮನೆ' (1955), 'ಕನ್ನಡಮ್ಮನ ಗುಡಿಯಲ್ಲಿ' (1954), 'ದೀಪಾರಾಧನೆ' (1955), 'ನಟಸಾರ್ವಭೌಮ'-1 (1940), ನಟಸಾರ್ವಭೌಮ'-2 (1946), ನಟಸಾರ್ವಭೌಮ'-3 (1955), 'ಅಭಿಮಾನ' (1960), 'ಮಿಯಾ ಮಲ್ಹಾರ್' (1964), 'ಬಣ್ಣದ ಬದುಕು' (1953), 'ಚಿತ್ರ ವಿಚಿತ್ರ'(1952).

'ಉದಯರಾಗ'ದ ನಾಯಕ ಮಾಣಿ ಚಿಕ್ಕವಯಸ್ಸಿನಲ್ಲೇ ತಂದೆಯನ್ನು ಕಳೆದುಕೊಂಡು, ತಾಯಿಯ ಆಶ್ರಯದಲ್ಲಿ ಬೆಳೆದು ಹೋಟೆಲ್ ಮಾಣಿಯಾಗಿ ಕೆಲಸಕ್ಕೆ ಸೇರಿದನು. ಅವನಲ್ಲಿ ಹುದುಗಿದ್ದ ಕಲೆಗೆ ಜೀವ ನೀಡಿದವರು ಮುಕುಂದರಾಯ, ಮೂರ್ತಿ, ರಮೇಶ. ಅನಂತರ ಶಾಂತಿನಿಕೇತನಕ್ಕೆ ತೆರಳಿ ನಂದಲಾಲರ ಮಾರ್ಗದರ್ಶನದಲ್ಲಿ ಕಲಾಭ್ಯಾಸ

ಮಾಡಿದನು. ಅಲ್ಲಿ ಅವನೀಶ, ನೀಲರ ಪರಿಚಯವಾಯಿತು. ಅವನೀಶನಿಂದ ರೂಪಳ ಪರಿಚಯವಾಗಿ ಅವನ ಜೀವನ ರೀತಿ ಬದಲುಗೊಂಡು, ಅನಾರೋಗ್ಯಕ್ಕೆ ತುತ್ತಾದನು. ಆ ನಡುವೆ ನೀಲನಿಂದ ಬೆಂಬಲ ದೊರೆತು, ಮಧುರ ಪತ್ರಿಕೆಯ ಕೆಲಸವನ್ನು ಆರಂಭಿಸಿ ಸ್ವಂತ ಕಲಾಶಾಲೆಯನ್ನು ತೆರೆದನು. ಚಾರುದಾಸಿ ಸ್ನೇಹ ಮಾಡಿ ಭೋಗಲೋಲುಪ ಜೀವನ ನಡೆಸಿ ವಿನಾಶದ ಸ್ಥಿತಿ ತಲುಪಿದಾಗ ನೀಲನಿಂದ ಚೇತರಿಕೆ ದೊರೆಯಿತು. ಆತ ಉಷಾಳನ್ನು ವಿವಾಹವಾಗುವುದರೊಂದಿಗೆ ಕಾದಂಬರಿ ಕಥೆ ಮುಕ್ತಾಯವಾಗುತ್ತದೆ. ಇಡೀ ಕಾದಂಬರಿ ಕಥೆ ಗಮನಿಸಿದಾಗ ಮೇಲುನೋಟಕ್ಕೆ ಸರಳೀಕೃತಗೊಂಡಂತೆ ಕಾಣುತ್ತದೆ. ಕಾದಂಬರಿ ರಚನೆಯ ಹಿನ್ನೆಲೆಯನ್ನು ಕುರಿತು ಅ.ನ.ಕೃ 'ಉದಯರಾಗದಲ್ಲಿ ನನ್ನ ಶಾಂತಿನಿಕೇತನದ ಅನುಭವ ಮತ್ತು ದರ್ಶನಗಳನ್ನು ಉಪಯೋಗಿಸಿಕೊಂಡು ಒಬ್ಬ ಚಿತ್ರಕಾರನ ಜೀವನದ ಹೋರಾಟ, ಕಲಾಸಾಧನೆಗಳನ್ನು ಚಿತ್ರಿಸಿದೆ'1 ಎನ್ನುತ್ತಾರೆ. ಇಲ್ಲಿ ಶಾಂತಿನಿಕೇತನದಲ್ಲಿ ಪಡೆದ ತಮ್ಮ ಅನುಭವಗಳನ್ನು ಚಿತ್ರಕಾರನ ಮೂಲಕ ದಾಖಲಿಸಲು ಮಾಡಿದ ಪ್ರಯತ್ನ ಎದ್ದು ಕಾಣುತ್ತದೆ. ಉತ್ತಮ ಕಲಾವಿದನಾದ ಮಾಣಿ ತನ್ನೊಳಗೆ ಅಡಗಿದ್ದ ನೋವುಗಳು ಹೊರಬಂದಾಗ ಅವನೀಶನ ಭೋಗ ಜೀವನಕ್ಕೆ ಮನಸೋತು ದಾರಿ ತಪ್ಪುತ್ತಾನೆ. ಇಲ್ಲೂ ಕೂಡಾ ಅ.ನ.ಕೃ ಕಲಾವಿದನ ಅಂತರಂಗದ ತಳಮಳಗಳನ್ನಾಗಲೀ ಒಬ್ಬ ವ್ಯಕ್ತಿಯಾಗಿ ಆತನ ಮಿತಿಗಳೇನೆಂಬುದನ್ನು ಗುರುತಿಸುವಲ್ಲಿ ವಿಫಲರಾಗುತ್ತಾರೆ.

'ಸಂಧ್ಯಾರಾಗ' (1935)ದಲ್ಲಿ ಸಂಗೀತಗಾರನೊಬ್ಬನ ಜೀವನ ಚಿತ್ರಣವಿದೆ. "ಕಲಾವಿದ ಚಿತ್ರಗಾರನಿರಲಿ, ಗಾಯಕನಿರಲಿ, ಸಾಹಿತಿಯಾಗಿರಲಿ ಜೀವನದ ಸಮಷ್ಟಿಯ ಕಡೆಗೇ ಬರುತ್ತಾನೆ. ಮೊದಲು ಯಾವದು ಭಿನ್ನವೋ, ಅದರ ಪೂರ್ಣತೆಯು ಅವನಿಗೆ ಗೋಚರವಾಗುತ್ತದೆ. ಆಗಲೇ ಅವರ ಜೀವನ ಪೂರ್ಣವಾಗುವುದು; ಬಾಳು ಸಾರ್ಥಕವಾಗುವುದು. ಅಂತಹ ಆದರ್ಶದ ಕಡೆಗೆ ಸಾಗಿದ ಒಬ್ಬ ಕಲಾವಿದನ ಚಿತ್ರವೇ ಸಂಧ್ಯಾರಾಗ"2 ಎಂದು ಮುನ್ನುಡಿಯಲ್ಲಿ ಹೇಳುತ್ತಾರೆ. ಸಂಧ್ಯಾರಾಗದ ಲಕ್ಷ್ಮಣ ಉದಯರಾಗದ ಮಾಣಿಯ ಹಾಗೆ ಬಡತನದಲ್ಲಿ ಹುಟ್ಟಿದವನಲ್ಲ. ಉತ್ತಮ ಸಂಸ್ಕಾರವನ್ನು ಹೊಂದಿದ್ದ ಶ್ರೀನಿವಾಸರಾಯ ಮತ್ತು ಮೀನಾಕ್ಷಮ್ಮ ದಂಪತಿಗಳ ಎರಡನೆಯ ಮಗನಾಗಿ ಜನಿಸಿದವನು. ಅಣ್ಣ ರಾಮಚಂದ್ರ ಮತ್ತು ಲಕ್ಷ್ಮಣ- ಈ ಇಬ್ಬರ ಗುರಿ, ದಾರಿಗಳು ಬೇರೆ ಬೇರೆ. ಜೀವನದಲ್ಲಿನ ಒಳಿತು ಕೆಡುಕುಗಳನ್ನು ರಾಮ ಲಕ್ಷ್ಮಣರ ಮೂಲಕ ಚಿತ್ರಿಸಿ, ಪ್ರತಿಯೊಬ್ಬ ಮನುಷ್ಯ ಎದುರಿಸಬಹುದಾದ ಗೊಂದಲಗಳನ್ನು ಸೂಚಿಸಲಾಗಿದೆ. ರಾಮಚಂದ್ರ ಹಣ ಸಂಪಾದನೆಯನ್ನೇ ಗುರಿಯಾಗಿಸಿಕೊಂಡವನು. ಸಂಗೀತವೇ ಜೀವನ ಎಂದು ನಂಬಿದವನು ಲಕ್ಷ್ಮಣ. ಆತನಿಗೆ ತನ್ನ ಜೀವನದ ಸಾರ್ಥಕತೆಯನ್ನು ಕಂಡುಕೊಳ್ಳುವಾಗ ಆದರ್ಶ, ಮೌಲ್ಯಗಳ ಅಗತ್ಯವಿತ್ತು. ಆದರೆ ಲಕ್ಷ್ಮಣನ ಕಲಾ ಸಾಧನೆಗೆ ಒದಗಿದ ಅಡ್ಡಿ ಆತಂಕಗಳು ಹಲವು; ಹೆಂಡತಿ ಜಯಾಳ ಸಾವಿನಿಂದ ಅವನು ತತ್ತರಿಸಿ ಹೋಗುತ್ತಾನೆ. ಊರೂರು ಅಲೆದು ತಂಜಾವೂರಿನ ಕೃಷ್ಣ ಅಯ್ಯರ್ ಬಳಿ ಸಂಗೀತಾಭ್ಯಾಸ ಮಾಡುತ್ತಾನೆ. ತನ್ನ ಬದುಕನ್ನೆಲ್ಲಾ ಸಂಪೂರ್ಣವಾಗಿ ಕಲೆಗೆ ಮುಡಿಪಾಗಿಡುತ್ತಾನೆ. ಮೀನಾಕ್ಷಮ್ಮ ಹಳ್ಳಿಗೆ ಬಂದಾಗ ಅವಳನ್ನು ಜನ ಸ್ವೀಕರಿಸುವುದು ಮತ್ತು ಅವಳ ಸಾವು, ಶ್ರೀನಿವಾಸರಾಯರ ಮರಣ, ಶಾಮಣ್ಣನ ಗೃಹತ್ಯಾಗ, ಜಯ ಶಾಂತರ ಸಂಯಮ, ಪದ್ಮಾಳ ಅಹಂಕಾರ, ರಾಮನ ಕ್ರೌರ್ಯ, ಲಕ್ಷ್ಮಣನ ಸಾವು ಮುಂತಾದ ಘಟನೆಗಳು ಅತಿ ಭಾವುಕತೆಯಿಂದ ಕೂಡಿದ್ದರೂ ಪರಿಣಾಮಕಾರಿಯಾಗಿ ಮೂಡಿಬಂದಿವೆ. ಮೇಲುನೋಟಕ್ಕೆ ಈ ಕಥೆ ಸರಳವಾಗಿ ಕಂಡರೂ, ವಿಶಿಷ್ಟವಾದ ಸಂಗತಿಗಳನ್ನು ಒಳಗೊಂಡಿದೆ. ಆಗ ಹಳ್ಳಿ ಮತ್ತು ನಗರಗಳ ನಡುವೆ ಸಂಘರ್ಷ ಏರ್ಪಟ್ಟು ಅನೇಕ ಗೊಂದಲಗಳು ಆರಂಭವಾಗಿದ್ದವು. ಗಾಂಧೀಜಿಯವರ ಪ್ರಭಾವಕ್ಕೆ ಒಳಗಾಗಿದ್ದ ಅ.ನ.ಕೃ ಗ್ರಾಮಜೀವನದ ಬಗ್ಗೆ ವಿಶೇಷ ಪ್ರೀತಿಯನ್ನು ಹೊಂದಿದ್ದರು. ಹಾಗಾಗಿ ಹಳ್ಳಿಗಳೆಂದರೆ ಅಪ್ಪಟ ಶುದ್ಧ, ಪ್ರಾಮಾಣಿಕ ಜೀವನ ಕ್ರಮವುಳ್ಳವೆಂದು ನಂಬಿದ್ದರು. ನಗರದ ಕಪಟ, ಸಿನಿಕ ಬದುಕು ಬೇಸರ ತರಿಸಿತ್ತು. ಸಹಜವಾಗಿ ಅ.ನ.ಕೃ ಅವರಿಗೆ ಗ್ರಾಮೀಣ ಬದುಕಿನ ಬಗ್ಗೆ ನಂಬಿಕೆ ಹೆಚ್ಚಾಯಿತು. ಇಲ್ಲಿಯ ರಾಮಚಂದ್ರ ನಗರದ ಬದುಕಿಗೆ ಮಾರು ಹೋಗಿ ಹಣ, ಅಧಿಕಾರಕ್ಕಾಗಿ ಹಂಬಲಿಸಿ ಸ್ವಾರ್ಥಿಯಾಗುತ್ತಾನೆ. ಸ್ವಾತಂತ್ರ್ಯ ಪೂರ್ವ

ಭಾರತದ ಮಧ್ಯಮ ವರ್ಗದ ಯುವ ಜನಾಂಗದ ಗೊಂದಲಗಳನ್ನು ರಾಮ-ಲಕ್ಷ್ಮಣರ ಮೂಲಕ ಬಿಂಬಿಸಲಾಗಿದೆ. ಆ ಕಾರಣಕ್ಕಾಗಿಯೇ 'ಸಂಧ್ಯಾರಾಗ' ಕಾದಂಬರಿಗೆ ತುಂಬಾ ಮಹತ್ವವಿದೆ.

ಸಾಹಿತಿಯೊಬ್ಬನ ಜೀವನದಲ್ಲಿ ಬರುವ ವಿವಿಧ ಸಮಸ್ಯೆಗಳು ಹಾಗೂ ಅವುಗಳನ್ನು ಎದುರಿಸಿದ ಬಗೆಯನ್ನು 'ಸಾಹಿತ್ಯ ರತ್ನ' ಕಾದಂಬರಿ ಮಾಲೆಯಲ್ಲಿ ನಿರೂಪಿಸಲಾಗಿದೆ. ಈ ಮಾಲೆಯಲ್ಲಿ ಪ್ರಕಟವಾದ ಕಾದಂಬರಿಗಳಿವು; 'ಸಾಹಿತ್ಯ ರತ್ನ' (1943), 'ಗಾಜಿನ ಮನೆ' (1953), 'ಕನ್ನಡಮ್ಮನ ಗುಡಿಯಲ್ಲಿ' (1954), 'ದೀಪಾರಾಧನೆ' (1955), 'ಸಾಹಿತ್ಯ ರತ್ನ' ಕಾದಂಬರಿ ಎರಡು ಕಾರಣಗಳಿಗೆ ಮುಖ್ಯವೆನಿಸುತ್ತದೆ. ಒಂದು- ಆದರ್ಶಜೀವಿ ಸಾಹಿತಿ ಎದುರಿಸಿದ ಕೌಟುಂಬಿಕ ಮತ್ತು ಇತರ ಸಮಸ್ಯೆಗಳು, ಎರಡು- ಈ ಸಮಸ್ಯೆಗಳನ್ನು ಎದುರಿಸಿದ ಪರಿ. ಇಲ್ಲಿ ಸ್ವಾತಂತ್ರ್ಯ ಪೂರ್ವದ ಮಧ್ಯಮ ವರ್ಗದ ಬದುಕು ಮತ್ತು ಸಾಹಿತಿಯೊಬ್ಬನ ಕೌಟುಂಬಿಕ ಚಿತ್ರಣದೊಂದಿಗೆ ರಾಜಕೀಯ, ಸಾಮಾಜಿಕ ಸಮಸ್ಯೆಗಳಿಗೆ ಪ್ರಾತಿನಿಧ್ಯ ನೀಡಲಾಗಿದೆ. ಸಾಹಿತಿಯೊಬ್ಬನ ಆಕಾಂಕ್ಷೆಗಳನ್ನು ಅರಿಯಲಾರದ ಮಡದಿ, ಕೌಟುಂಬಿಕವಾಗಿ ನೆಮ್ಮದಿಯಿಲ್ಲದ ಆದರ್ಶದ ಕನಸನ್ನು ಹೊತ್ತು ಬೀದಿಯಲ್ಲಿ ಸುತ್ತುವ ಸಾಹಿತಿಯ ಬದುಕನ್ನು ಚಿತ್ರಿಸುವುದು ಅ.ನ.ಕೃ ಅವರ ಉದ್ದೇಶವಾಗಿದೆ. ನಾಯಕ ಮೂರ್ತಿ ತನ್ನ ತಂದೆ ವೆಂಕಟರಾಯರಿಗೆ ಹೀಗೆ ಹೇಳುತ್ತಾನೆ; "ಧರ್ಮ ಜನಿವಾರದಲ್ಲಿಯೂ ಇಲ್ಲ, ಲಿಂಗದಲ್ಲಿಯೂ ಇಲ್ಲ, ಮೌಲ್ವಿ ಸಾಹೇಬರ ಉದ್ದನೆಯ ಗಡ್ಡದಲ್ಲಿಯೂ ಇಲ್ಲ, ಮನುಷ್ಯನ ಅಂತಃಕರಣದಲ್ಲಿ ಅದು ಗುಪ್ತವಾಗಿ ಕುಳಿತಿರುತ್ತದೆ. ಅದನ್ನು ಅರ್ಥಮಾಡಿಕೊಳ್ಳಲಾಗದ ಮೂಢ ಮನುಷ್ಯ ಜನಿವಾರ, ಲಿಂಗಗಳಿಗೆ ನೇಣು ಹಾಕಿಕೊಳ್ಳುತ್ತಾನೆ"3 ಹೀಗೆ ಅ.ನ.ಕೃ ಧರ್ಮವನ್ನು ಕಂಡದ್ದು ಮನುಷ್ಯನ ಅಂತಃಕರಣದಲ್ಲಿ; ಮಾನವೀಯತೆಯಲ್ಲಿ. ಮುಂಬೈಗೆ ತೆರಳಿದ ಮೂರ್ತಿ ದಾಮ್ಲೆ, ನಾನಾ ಮೊದಲಾದವರ ಪರಿಚಯದಿಂದ ಪತ್ರಿಕೆಯಲ್ಲಿ ಬರೆಯತೊಡಗುತ್ತಾನೆ. ಆ ಮೂಲಕ ಅ.ನ.ಕೃ ಅವರ ಪ್ರಗತಿಪರ ನಿಲುವುಗಳು ಸ್ಪಷ್ಟಗೊಳ್ಳುತ್ತವೆ. ಪತ್ರಿಕೆಯ ಬಗ್ಗೆ ಅವರು ತೆಗೆದುಕೊಂಡ ನಿಲುವು ಹೀಗಿದೆ: "ನಮ್ಮ ಪತ್ರಿಕೆ ಹೇಗೂ ಬಡವರ ಮನೆ ಇದ್ದ ಹಾಗಿದೆ. ಬಂದವರಿಗೂ ಇದ್ದ ರೊಟ್ಟಿಯ ಒಂದು ತುಣುಕು ಇತ್ತರಾಯಿತು. ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಎಲ್ಲಾ ವಿಷಯಗಳನ್ನು ನಾವು ಸಾಮ್ಯವಾದದ ಆಶಯಗಳನ್ನು ಈ ಕೃತಿಯಲ್ಲಿ ಒಡಮೂಡಿಸುವ ಪ್ರಯತ್ನವನ್ನು ಮಾಡಿದ್ದಾರೆ.

ಆದರ್ಶವಾದಿ ನೆಲೆಯ ವಾಸ್ತವತೆಯನ್ನು ಚಿತ್ರಿಸಹೊರಟ ಅ.ನ.ಕೃ 'ಗಾಜಿನ ಮನೆ' (1953)ಯಲ್ಲಿ ಸಾಹಿತಿ ಮೂರ್ತಿ ಪತ್ರಿಕೋದ್ಯಮಿಯಾದುದನ್ನು ಚಿತ್ರಿಸಿದ್ದಾರೆ. ಅಂದಿನ ಪತ್ರಿಕೋದ್ಯಮದಲ್ಲಿ ನಡೆಯುತ್ತಿದ್ದ ಸ್ವಜನಪಕ್ಷಪಾತ, ಸ್ವಾರ್ಥ, ಸಮಯಸಾಧಕತನ, ಬ್ಲಾಕ್'ಮೇಲ್'ನಂತಹ ಸಣ್ಣತನಗಳನ್ನು ಕಾದಂಬರಿ ಒಳಗೊಂಡಿದೆ. ಬಡತನ, ದಾರಿದ್ರ್ಯದಂಥ ಹತ್ತಾರು ಸಮಸ್ಯೆಗಳನ್ನು ಬಗೆಹರಿಸ ಹೊರಟ ಮೂರ್ತಿಗೆ ಭ್ರಮನಿರಸನವಾಗುತ್ತದೆ. ಬಡತನವನ್ನು ಕುರಿತು ಲಲಿತಳೊಂದಿಗೆ ಮೂರ್ತಿ ನಡೆಸುವ ಸಂಭಾಷಣೆ ಹೀಗಿದೆ: "... ಇಂದು ಶ್ರೀಮಂತ ಬಡವನನ್ನು ಸುಲಿಯುತ್ತಿದ್ದಾನೆ; ನಾಳೆ ಬಡವ ಶ್ರೀಮಂತನನ್ನು ಸುಲಿಯುತ್ತಾನೆ. ನಾಳಿದ್ದು ಬಡವ ಬಡವನನ್ನೇ ಸುಲಿಯುತ್ತಾನೆ. ಕಾಲ ಬದಲಾಯಿಸಿದಂತೆ ಮನುಷ್ಯನ ಸ್ವಭಾವ ಬದಲಾಯಿಸುವುದಿಲ್ಲ, ಸುಲಿಗೆಯ ಸ್ವರೂಪ ಬದಲಾಯಿಸುತ್ತ ಹೋಗುತ್ತದೆ"4 ಒಂದು ಬಗೆಯಲ್ಲಿ ಮಾರ್ಕ್ಸ್'ನ ಚಿಂತನೆಗಳಿಂದ ಪ್ರಭಾವಿತಗೊಂಡಿತಾದರೂ, ಅ.ನ.ಕೃ ಅವರು ಮಾರ್ಕ್ಸ್'ವಾದದ ಆಲೋಚನೆಗಳನ್ನು ನಮ್ಮಲ್ಲೆ ಹುಡುಕುವ ಪ್ರಯತ್ನ ಮಾಡಿದರು. ಜೊತೆಗೆ "ಸಾಹಿತ್ಯದ ಅವಿನಾಶಿಯಾದ ಗುಣಗಳಿದ್ದರೇ ಅದು ಸಾಹಿತ್ಯವಾಗುತ್ತದಲ್ಲದೆ ಕಮ್ಯುನಿಸಂ ಕಸಿ ಮಾಡಿಕೊಳ್ಳುವುದರಿಂದ ಸಾಹಿತ್ಯವಾಗುವುದಿಲ್ಲ"5 ಎಂದು ಕಮ್ಯುನಿಸಂ ಬಗೆಗಿನ ತಮ್ಮ ನಿಖರ ನಿರ್ಧಾರವನ್ನು ವ್ಯಕ್ತಪಡಿಸುತ್ತಾರೆ. ಹೀಗೆ ಒಂದು ಕಡೆ ಕಮ್ಯುನಿಸಂ ಆಲೋಚನೆಗಳ ಬಗ್ಗೆ ಸಹಮತವಿದ್ದರೆ ಮತ್ತೊಂದೆಡೆ ತಾತ್ವಿಕವಾಗಿ ಕಮ್ಯುನಿಸಂನ್ನು ಒಪ್ಪಿಕೊಳ್ಳುವುದಿಲ್ಲ. ಇಂತಹ ವೈಚಾರಿಕ ಗೊಂದಲಗಳಿಂದಾಗಿ ಅವರ ಸೃಜನಶೀಲ ಸಾಮರ್ಥ್ಯ ಕುಂಠಿತಗೊಂಡಂತೆ ಭಾಸವಾಗುತ್ತದೆ.

'ಕನ್ನಡಮ್ಮನ ಗುಡಿಯಲ್ಲಿ'(1954) ಕಾದಂಬರಿ ಬರೆಯುವ ಕಾಲಕ್ಕೆ ಅ.ನ.ಕೃ ಅವರ ಕಮ್ಯುನಿಸಂ ಬಗೆಗಿನ ಅಸಹನೆ

ತೀವ್ರಗೊಂಡಿತು. ಕಾದಂಬರಿಯ ಮುನ್ನುಡಿಯಲ್ಲಿ ಹೀಗೆ ಅಭಿಪ್ರಾಯಪಡುತ್ತಾರೆ: "ನಮ್ಮ ರಾಷ್ಟ್ರ ಜೀವನವನ್ನು ಪ್ರತಿಭಟಿಸುತ್ತಿರುವ ಕಮ್ಯುನಿಸಂ, ನಮ್ಮ ಸಾಂಸ್ಕೃತಿಕ ಜೀವನವನ್ನು ಬುಡಮೇಲು ಮಾಡಿ, ಅದರ ಸ್ಥಾನದಲ್ಲಿ ರಷ್ಯಾದ ಸರ್ವಾಧಿಕಾರ ಸ್ಥಾಪಿಸಲು ಹವಣಿಸುತ್ತಿದೆ. ನಮ್ಮ ರಾಜಕೀಯ ಜೀವನವನ್ನು ಕಮ್ಯುನಿಸಂ ಕದಡಿ, ದೇಶವನ್ನು ಅಶಾಂತಿ, ಅನಾಯಕತ್ವ, ರಕ್ತಪಾತ, ಶೋಷಣೆ, ಚಿರಂತನದಾಸ್ಯಗಳ ರುದ್ರಭೂಮಿಯನ್ನಾಗಿ ಮಾಡಬೇಕೆಂದು ಹೇಗೆ ಸಂಚು ಮಾಡುತ್ತಿದೆಯೋ ಹಾಗೆ ನಮ್ಮ ಸಾಮಾಜಿಕ ಜೀವನ, ಲಲಿತ ಕಲೆ, ಸಾಹಿತ್ಯವನ್ನು ರಷ್ಯಾದ ವಿಕ್ರೀತದಾಸರನ್ನಾಗಿ ಮಾಡಬೇಕೆಂದು ಶಕ್ತಿಮೀರಿ ಪ್ರಯತ್ನಿಸುತ್ತಿದೆ"6 ಇಲ್ಲಿ ಅ.ನ.ಕೃ ಅವರು ಕಮ್ಯುನಿಸಂ ಅನ್ನು ಅರ್ಥೈಸಿಕೊಳ್ಳದೆ, ತಮ್ಮ ತಪ್ಪು ಗ್ರಹಿಕೆಯಿಂದ, ಕಮ್ಯುನಿಸಂ ನಮ್ಮ ರಾಜಕೀಯ ಜೀವನವನ್ನೇ ಹಾಳು ಮಾಡುತ್ತದೆ ಎಂಬ ನಿರ್ಧಾರಕ್ಕೆ ಬರುತ್ತಾರೆ. ಆದರೆ ರಷ್ಯಾದ ಪುಷ್ಕಿನ್, ದಾಸ್ತೊವಸ್ಕಿ, ಟಾಲ್'ಸ್ಟಾಯ್, ಗಾರ್ಕಿ, ಮಾಯಕೊವಸ್ಕಿಯವರಂಥ ಬರಹಗಾರರನ್ನು ಒಪ್ಪಿಕೊಳ್ಳುತ್ತಾರೆ. "ಕಮ್ಯುನಿಸಂ ಇಂದು ಭಾರತಶಕ್ತಿಗೇ ಸವಾಲನ್ನಿತ್ತಿದೆ. ಭಾರತ ಆ ಸವಾಲನ್ನು ಸ್ವೀಕರಿಸಿ ಕಮ್ಯುನಿಸಂ ದೈತ್ಯ ಶಕ್ತಿಯೊಂದಿಗೆ ಹೋರಾಡಿ ಜಯಗಳಿಸಲು ಸಮರ್ಥವಾಗಿದೆ ಎಂಬ ನನ್ನ ನಂಬಿಕೆಯನ್ನೇ 'ಗಾಜಿನ ಮನೆ', 'ಸಂಗ್ರಾಮ', 'ಕನ್ನಡಮ್ಮನ ಗುಡಿಯಲ್ಲಿ' ಕಾದಂಬರಿಗಳಲ್ಲಿ ಸ್ಥಾಪಿಸಿದ್ದೇನೆ"7 ಎಂಬಲ್ಲಿ ಅ.ನ.ಕೃ ಅವರ ಕಮ್ಯುನಿಸಂ ವಿರೋಧಿ ಹಠ ಎದ್ದು ಕಾಣುತ್ತದೆ. ನೆಹರೂ ವಿಚಾರಧಾರೆಯನ್ನು ವಿರೋಧಿಸುವ ಗುಂಪು ಪ್ರಗತಿಶೀಲ ಚಳವಳಿಯಲ್ಲಿತ್ತು. ಆದರೆ ಅ.ನ.ಕೃ ಅವರು ನೆಹರೂ ವಿಚಾರಧಾರೆಯನ್ನು ಸಮರ್ಥಿಸುತ್ತಾರೆ. ಇಂಥ ವಿರೋಧಾಭಾಸಗಳನ್ನು ಹೊಂದಿದ್ದರಿಂದ ಸಮಕಾಲೀನ ಆಲೋಚನೆ, ಚಿಂತನಾಕ್ರಮಗಳನ್ನು ಅರಗಿಸಿಕೊಂಡು ಕೃತಿಯಲ್ಲಿ ಒಡಮೂಡಿಸುವಲ್ಲಿ ಸಾಕಷ್ಟು ಯಶಕಾಣಲು ಸಾಧ್ಯವಾಗಲಿಲ್ಲ. 'ದೀಪಾರಾಧನೆ' (1955) ಸಾಹಿತ್ಯ ರತ್ನ ಮಾಲೆಯ ಕೊನೆಯ ಕಾದಂಬರಿ. ಇದರಲ್ಲಿ ಸ್ವತಂತ್ರ ಭಾರತದ ಸಾಹಿತಿ, ಪತ್ರಿಕೋದ್ಯಮ, ಸಾಮಾಜಿಕ ಮತ್ತು ರಾಜಕೀಯ ಬದುಕಿನ ಸ್ಥಿತಿಗತಿಗಳ ಚಿತ್ರಣವಿದೆ.

ಚಿತ್ರಕಾರನ ಬದುಕು ಮತ್ತು ಅವನು ಎದುರಿಸಿದ ಸಮಸ್ಯೆಗಳನ್ನು 'ಕಲಾವಿಕ' (1966) ಮತ್ತು 'ಪರಿವರ್ತನೆ' (1967) ಕಾದಂಬರಿಗಳಲ್ಲಿ ಚಿತ್ರಿಸಲಾಗಿದೆ. ಕಲಾಕ್ಷೇತ್ರದೊಳಗೆ ರಾಜಕಾರಣ ಪ್ರವೇಶ, ಪ್ರತಿಭೆಗಳ ನಿರ್ಲಕ್ಷ್ಯ, ಪತ್ರಿಕೋದ್ಯಮದೊಳಗಿನ ತಾರತಮ್ಯ, ಶ್ರೀಮಂತರ ಅಟ್ಟಹಾಸ ಹಾಗೂ ಉದಾರತೆ- ಇಂಥ ವಿವಿಧ ಪರಿಸರದ ಮಧ್ಯೆ ಕಲಾವಿದನ ಬದುಕನ್ನು ಇಟ್ಟುನೋಡುವ ಪ್ರಯತ್ನವಿದೆ. 'ಮಿಯಾಮಲ್ಹಾರ್' (1964) ಒಬ್ಬ ಮುಸ್ಲಿಮ ಸಂಗೀತ ಕಲಾವಿದನ ಜೀವನದ ಏರುಪೇರುಗಳನ್ನು ಚಿತ್ರಿಸುವ ಕಾದಂಬರಿ. ಅ.ನ.ಕೃ ಬದುಕಿದ್ದು ಜಾತಿ-ಮತಗಳ ಸೋಂಕಿಲ್ಲದ ವಾತಾವರಣದಲ್ಲಿ, ಹಾಗಾಗಿ ಅವರ ಕಾದಂಬರಿಗಳಲ್ಲಿ ಮುಸ್ಲಿಂ ಜೀವಿಗಳ ಬದುಕೂ ಕೂಡ ನಿರೂಪಿತವಾಗಿದೆ. ಈ ಕಾದಂಬರಿಯ ನಾಯಕ ಪೀರ್ ಜಾದ್ ಒಬ್ಬ ಸಾಮಾನ್ಯ ಜಟಕಾವಾಲನ ಮಗ. ಆತ ತಂದೆಗೆ ಇಷ್ಟವಿಲ್ಲದಿದ್ದರೂ ಸಂಗೀತ ಕಲಿಯಲು ಬಯಸುತ್ತಾನೆ. ನಾಟಕ ಕಂಪೆನಿಗಳ ಹಾಡುಗಳನ್ನು ಕೇಳುವ ಮೂಲಕ ಅಭ್ಯಾಸ ಆರಂಭಿಸುತ್ತಾನೆ. ಸಾಬಿರ್'ಖಾನ್ ಮಾರ್ಗದರ್ಶನದಲ್ಲಿ ವಿದ್ಯಾಭ್ಯಾಸ ಆರಂಭಿಸಿ, ಮುಂದೆ ಬಹುದೊಡ್ಡ ವಿದ್ವಾಂಸನಾಗುತ್ತಾನೆ. ಕೊನೆಗೆ ತಂದೆಯ ವೃತ್ತಿಯನ್ನೇ ಅನುಸರಿಸಿ ಜೀವನ ಮಾಡುತ್ತಾನೆ. ಹಣ, ಕೀರ್ತಿ ಎರಡೂ ಹೇಗೆ ಒಬ್ಬ ಕಲಾವಿದನನ್ನು ವಿನಾಶದೆಡೆಗೆ ಕೊಂಡೊಯ್ಯುತ್ತವೆ ಎಂಬುದು ಕಾದಂಬರಿ ಪ್ರಧಾನ ವಸ್ತು. ಕಲಾವಿದನ ಸೋಲನ್ನು ತುಂಬಾ ಸರಳಾತ್ಮಕ ನಿರೂಪಣೆಯಲ್ಲಿ ಕಾದಂಬರಿಕಾರರು ಹಿಡಿದಿಟ್ಟಿದ್ದಾರೆ. ಇಂಥ ಕಡೆ ಅ.ನ.ಕೃ ಅವರ ಬರವಣಿಗೆಯ ಸಡಿಲತನ ಎದ್ದು ಕಾಣುತ್ತದೆ. 'ಸಂಗ್ರಾಮ'(1953) ವಿದೇಶದಲ್ಲಿ ಶಿಕ್ಷಣ ಪಡೆದು ಬಂದ ಭಾರತದ ಶಿಲ್ಪಿಯೊಬ್ಬನ ಕಥೆ. ಸ್ವತಂತ್ರ ಭಾರತದ ಪ್ರತಿಭಾಪಲಾಯನ ಮತ್ತು ಆಧುನೀಕರಣದ ಹೊಡೆತಕ್ಕೆ ಸಿಕ್ಕಿದ ಕಲಾವಿದನ ಚಿತ್ರಣವಿದೆ. ಭಾರತದ ಶಿಲ್ಪ ಸಂಪ್ರದಾಯ ನಶಿಸಿ ಹೋಗುತ್ತಿದೆ; ಅದನ್ನು ಉಳಿಸಿ ಬೆಳೆಸಿಕೊಳ್ಳಬೇಕೆಂಬ ಪುನರುಜ್ಜೀವನದ ಹಂಬಲ ಇಲ್ಲಿದೆ.
ಸಮಕಾಲೀನ ಕಲಾಜಗತ್ತಿನ ಸ್ಥಿತಿಗತಿಗಳ ಚಿತ್ರಣ 'ಕಟ್ಟಿದ ಬಣ್ಣ' (1956), 'ಭುವನಮೋಹಿನಿ' (1960), 'ಬಣ್ಣದ ಬದುಕು' (1953) ಕಾದಂಬರಿಗಳಲ್ಲಿದೆ. ಆಧುನೀಕರಣದ

ಫಲವಾಗಿ ಕಲೆಯನ್ನು ವ್ಯಾಪಾರೀಕರಣಗೊಳಿಸುವ ಪ್ರಯತ್ನ ನಡೆಯಿತು. ಕಲೆಯನ್ನು ಮಾರುಕಟ್ಟೆಯೊಳಗಿಟ್ಟು ಬೆಲೆ ನಿಗದಿಮಾಡುವ ಪರಿಸ್ಥಿತಿ ನಿರ್ಮಾಣವಾಯಿತು. ಹಣ, ಅಧಿಕಾರದಿಂದಾಗಿ ಕಲೆಯ ಸ್ಥಾನಮಾನಗಳು ಪಲ್ಲಟವಾದವು. ಆಗ ಸಮಾಜ ಪ್ರತಿಭೆಯನ್ನು ಪುರಸ್ಕರಿಸುವುದನ್ನು ಮರೆಯಿತು. ಆಧುನಿಕ ಜಗತ್ತಿನೊಳಗೆ ಕಲಾವಿದನು ತನ್ನನ್ನು ಗುರುತಿಸಿಕೊಳ್ಳುವುದು ಅನಿವಾರ್ಯವಾಯಿತು. ಆದುದರಿಂದ ಕಲಾವಿದನು ದಾರಿ ತಪ್ಪುವಂತಾಯಿತು. ಕಲಾವಿದರು ಕಲೆಯ ಸಿದ್ಧಿಗೆ ಬೇಕಾದ ಅರ್ಪಣಾಮನೋಭಾವ, ತ್ಯಾಗ, ವೈರಾಗ್ಯಗಳನ್ನು ರೂಢಿಸಿಕೊಳ್ಳುವಲ್ಲಿ ವಿಫಲರಾಗಿ ಭೋಗಲಾಲಸೆಯ ಜೀವನಕ್ಕೆ ಮನಸೋತರು. ಇವೆಲ್ಲವು ಸ್ವತಂತ್ರ ಭಾರತದ ಕಲಾಜಗತ್ತು ಎದುರಿಸಿದ ಬಿಕ್ಕಟ್ಟುಗಳು. 'ಕಟ್ಟಿದ ಬಣ್ಣ' (1956) ಕಾದಂಬರಿಯಲ್ಲಿ ಸಂಗೀತ ಪ್ರಪಂಬದಲ್ಲಿ ನಡೆಯುವ ಸ್ವಾರ್ಥ, ಅಸೂಯೆಗಳ ಚಿತ್ರಣವಿದೆ. ಬಣ್ಣದ ಬದುಕು' (1953) ಕಾದಂಬರಿಯಲ್ಲಿ ಭರತನಾಟ್ಯ ಕಲೆಯನ್ನು ವ್ಯಾಪಾರೀಕರಣಗೊಳಿಸಿದಾಗ ಆಗಬಹುದಾದ ಅನಾಹುತಗಳ ಚಿತ್ರಣವಿದೆ. ವ್ಯಾಪಾರೀಕರಣದ ಪ್ರಭಾವಕ್ಕೆ ತುತ್ತಾಗಿ ಯೋಗಭ್ರಷ್ಟನಾದ ಕೀರ್ತಿ ಇವೆಲ್ಲವನ್ನೂ ಮೀರಿದ ಆದರ್ಶಜೀವಿ ಕಲ್ಪನಾ ವಿಶಿಷ್ಟ ಪಾತ್ರಗಳು. ವಿದೇಶಿ ವ್ಯಾಮೋಹ, ಸಿನಿಮಾ ಜಗತ್ತು, ಆಧುನಿಕರಣಗಳಿಂದ ಅಂದಿನ ಕಲಾ ಜಗತ್ತು ಎದುರಿಸಿದ ಸಮಸ್ಯೆಗಳ ಸವಿವರಣೆ ಕಾದಂಬರಿಯ ಗುಣಾತ್ಮಕ ಅಂಶವಾಗಿದೆ. ಭಾರತ ಸಂದರ್ಭದಲ್ಲಿ ಸಿನಿಮಾ ಪ್ರವೇಶದಿಂದಾಗಿ ಮಹತ್ತರ ಪರಿಣಾಮಗಳು ಉಂಟಾದವು. ಕಲೆ, ಸಾಹಿತ್ಯ, ಸಂಸ್ಕೃತಿಯ ಮೇಲೆ ಅದು ಉಂಟುಮಾಡುವ ಪರಿಣಾಮಗಳನ್ನು 'ಚಿತ್ರವಿಚಿತ್ರ' (1952) ಕಾದಂಬರಿಯಲ್ಲಿ ಸೂಚಿಸಲಾಗಿದೆ. ಕಂಪೆನಿ ನಾಟಕಗಳ ಸ್ಥಿತಿಗತಿಗಳನ್ನು 'ಅಭಿಮಾನ' (1960), 'ನಟಸಾರ್ವಭೌಮ'-1(1940), ನಟಸಾರ್ವಭೌಮ'-2(1946), ನಟಸಾರ್ವಭೌಮ'-3(1955), ಕಾದಂಬರಿಗಳಲ್ಲಿ ಕಾಣಬಹುದು. ಮೂರು ಸಂಪುಟಗಳಲ್ಲಿರುವ 'ನಟಸಾರ್ವಭೌಮ' ಕಾದಂಬರಿ ಅಸಾಮಾನ್ಯ ಕಲಾವಿದನೊಬ್ಬನ ಏಳುಬೀಳು, ಎತ್ತರ ಬಿತ್ತರಗಳನ್ನೊಳಗೊಂಡ ಕಾದಂಬರಿ. ಈ ಕಾದಂಬರಿ ಕಥಾನಾಯಕ "ರಾಜ ಅನೀತಿಗಾಗಿ ಲೈಸೆನ್ಸ್ ಪಡೆದ ಕಲಾವಿದನಾಗಿ ಕಾಣುತ್ತಾನೆ. ರಾಜ ಅಂಥ ವ್ಯಕ್ತಿಯಾಗಿರಬಾರದೆಂದೇನೂ ಇಲ್ಲ. ನೀಲಾ ಆಧುನಿಕ ವಸಂತ ಸೇನೆಯಾಗಿದ್ದಾಳೆ. ಅವಳ ಪ್ರೇಮ ಅಲೌಕಿಕವಾದದ್ದು, ಅವರೀರ್ವರ ಪ್ರಣಯ ಸಂಬಂಧ ಮಾತ್ರ ಸಾಮಾನ್ಯವಾಗಿಯೇ ಇದೆ"8 ಎಂಬ ಕುರ್ತಕೋಟಿಯವರ ಅಭಿಪ್ರಾಯ ಸರಿ ಎನಿಸುತ್ತದೆ. 'ನಟಸಾರ್ವಭೌಮ'ದ ನಾಯಕ ಹುಸಿ ಆದರ್ಶ ಪಾತ್ರವಾಗಿ ಕಾಣುತ್ತದೆ. ಕಲಾತ್ಮಕ ಚೌಕಟ್ಟಿನಲ್ಲಿ ಪಾತ್ರ ಅರಳಲು ಸಾಧ್ಯವಾಗಿಲ್ಲ.

**ಸಮಾರೋಪ**

ಕಲಾವಿದರು, ರಂಗಭೂಮಿ, ಸಿನಿಮಾ ಜಗತ್ತನ್ನು ಕುರಿತ ಕಾದಂಬರಿಗಳ ಗುಣಾತ್ಮಕ ಅಂಶಗಳು ಹೀಗಿವೆ;

1. ಸಾಹಿತಿ, ನಟ, ಶಿಲ್ಪಿ, ಚಿತ್ರಕಾರ, ಸಂಗೀತಗಾರ ಇಲ್ಲಿನ ಕಾದಂಬರಿಗಳ ನಾಯಕರು. ಅವರೆಲ್ಲರೂ ಆದರ್ಶಜೀವಿಗಳಂತೆ ಚಿತ್ರಿಸಲ್ಪಟ್ಟಿದ್ದಾರೆ.
2. 'ಉದಯರಾಗ', 'ಸಂಧ್ಯಾರಾಗ'- ಇವು ವಾಸ್ತವವಾದಿ ಪರಂಪರೆಯ ಕಾದಂಬರಿಗಳು.
3. ಲಲಿತಕಲೆಗಳು, ಸಂಸ್ಕೃತಿ ನಮ್ಮ ನಾಡಿನ ಸಂಪತ್ತು. ಅದು ಕಮ್ಯುನಿಸಂ ಮುಂತಾದ ಹೊರಗಿನ ವಿಚಾರಗಳಿಂದ ನಶಿಸುತ್ತದೆ ಎಂಬ ಆತಂಕ ಕಾದಂಬರಿಗಳಲ್ಲಿ ವ್ಯಕ್ತವಾಗಿದೆ.
4. ಸಮಕಾಲೀನ ರಂಗಭೂಮಿ, ಸಿನಿಮಾಪ್ರಪಂಚ, ಸಾಹಿತ್ಯಲೋಕದಲ್ಲಿ ನಡೆಯುತ್ತಿದ್ದ ಸ್ಥಿತಿ-ಗತಿಗಳ ಚಿತ್ರಣವಿದೆ.
5. ಸಾಹಿತಿ, ನಟ, ಶಿಲ್ಪಿ, ಸಂಗೀತಗಾರ ಮುಂತಾದ ಕಲಾವಿದರ ಮೇಲೆ ನಗರ ಸಂಸ್ಕೃತಿಯು ಪ್ರಭಾವ ಬೀರಿ ಅವರು ದಾರಿ ತಪ್ಪುತ್ತಿರುವ ಬಗ್ಗೆ ಆತಂಕವಿದೆ.
6. ಈ ಕಾದಂಬರಿಗಳ ರಚನೆ ಸರಳವಾಗಿದ್ದು; ಕೆಲವಾರು ವಿನೂತನ ಪಾತ್ರಗಳನ್ನು ರೂಪಿಸಲಾಗಿದೆ; ಸಂಕೀರ್ಣತೆ ಎಂಬುದಿಲ್ಲ.

**ಕೊನೆ ಟಿಪ್ಪಣಿಗಳು**

1. ಅ.ನ.ಕೃ ಬರಹಗಾರನ ಬದುಕು ಪುಟ.216
2. ಸಂಧ್ಯಾರಾಗ ಮುನ್ನುಡಿ
3. ಸಾಹಿತ್ಯ ರತ್ನ ಪುಟ. 54
4. ಗಾಜಿನ ಮನೆ ಪುಟ. 100
5. ಅದೇ ಪುಟ.132
6. ಕನ್ನಡಮ್ಮನ ಗುಡಿಯಲ್ಲಿ ಮುನ್ನುಡಿ
7. ಅದೇ
8. ನಟಸಾರ್ವಭೌಮ-1 ಪುಟ.15

**ಉಲ್ಲೇಖಗಳು**

1. ಆಮೂರ ಜಿ.ಎಸ್. - ಅ.ನ.ಕೃಷ್ಣರಾಯರು, ಕೇಂದ್ರ ಸಾಹಿತ್ಯ ಅಕಾಡೆಮಿ, ನವದೆಹಲಿ
2. ಆಮೂರ ಜಿ.ಎಸ್. - ಸಮಕಾಲೀನ ಕಥೆ ಕಾದಂಬರಿ ಹೊಸ ಪ್ರಯೋಗಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
3. ಕೀರ್ತಿನಾಥ ಕುರ್ತಕೋಟಿ- ಯುಗಧರ್ಮ ಮತ್ತು ಸಾಹಿತ್ಯದರ್ಶನ, ಮನೋಹರ ಗ್ರಂಥಮಾಲೆ, ಧಾರವಾಡ
4. ನಾಗರಾಜಪ್ಪ ಕೆ.ಜಿ. – ಸಾಹಿತ್ಯ ಮತ್ತು ಸಾಮಾಜಿಕ ನಿಲುವುಗಳು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು